**ಕರ್ನಾಟಕ ಸರ್ಕಾರ**

**ಉಪನಿರ್ದೇಶಕರು ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉತ್ತರ ಕನ್ನಡ, ಕಾರವಾರ**

ದೂ.ಸಂ: 08382-227949 ಮಿಂಚಂಚೆ-ddqq.pue@gmail.com

ಪಸಂ: ಉನಿಕಕಾ/ಪಪೂಶಿಇ/ರಾ.ಚೆ/2024-25 ದಿನಾಂಕ:16-10-2024

**ಗೆ,**
ರಾಜ್ಯದ ಎಲ್ಲಾ ಜಿಲ್ಲೆಗಳ
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)
ಉಪನಿರ್ದೇಶಕರಿಗೆ,

ಮಾನ್ಯರೆ,

ವಿಷಯ: 2024-25 ನೇ ಸಾಲಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ ವಿದ್ಯಾರ್ಥಿಗಳ ರಾಜ್ಯಮಟ್ಟದ ಚೆಸ್ ಪಂದ್ಯಾವಳಿಗಳನ್ನು ನಡೆಸುವ ಬಗ್ಗೆ.

ಉಲ್ಲೇಖ: ಮಾನ್ಯ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:15-07-2024 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಯಂತೆ.

******

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಉತ್ತರ ಕನ್ನಡ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಹಾಗೂ ಶ್ರೀ ಮಾರಿಕಾಂಬಾ ಸರಕಾರಿ ಪದವಿ ಪೂರ್ವ ಕಾಲೇಜು, ಶಿರಸಿ ಇವರ ಸಂಯುಕ್ತ ಆಶ್ರಯದಲ್ಲಿ 2024-25 ನೇ ಸಾಲಿನ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ/ನಿಯರ ರಾಜ್ಯಮಟ್ಟದ ಚೆಸ್ ಪಂದ್ಯಾವಳಿಗಳನ್ನು **ದಿನಾಂಕ: 05-11-2024 ಮತ್ತು 06-11-2024** ರಂದು, ಅಂಬೇಡ್ಕರ್ ಭವನ, ಯಾಲ್ಲಾಪುರ ರಸ್ತೆ, ಶಿರಸಿ, ಉತ್ತರ ಕನ್ನಡ ಇಲ್ಲಿ ನಡೆಸಲಾಗುವುದು. ಆದ್ದರಿಂದ ತಮ್ಮ ಜಿಲ್ಲೆಯ ಸ್ಪರ್ಧಿಗಳ ಪ್ರವೇಶ ಪಟ್ಟಿಯ ಜೊತೆಯಲ್ಲಿ ಚೆಸ್ ಕ್ರೀಡಾ ಪಟುಗಳ ಬಾಲಕರ ಮತ್ತು ಬಾಲಕಿಯರ ತಂಡದ ವ್ಯವಸ್ಥಾಪಕರ ನೋಂದಣಿಯನ್ನು **ಶ್ರೀ ಮಾರಿಕಾಂಬಾ ಸರಕಾರಿ ಪದವಿ ಪೂರ್ವ ಕಾಲೇಜು, ಶಿರಸಿ** ಇಲ್ಲಿ ದಿನಾಂಕ: 04-11-2024 ರಂದು ಸಂಜೆ 05.30 ಗಂಟೆಯವರೆಗೆ ವರದಿ ಮಾಡಿಕೊಳ್ಳುವುದು. ತಮ್ಮ ಜಿಲ್ಲೆಯ ಸ್ಪರ್ಧಿಗಳ ಪ್ರವೇಶ ಪಟ್ಟಿಯನ್ನು ದಿನಾಂಕ:25-10-2024ರ ಒಳಗೆ ಈ ಕಛೇರಿ ಇ-ಮೇಲ್ ddqq.pue@gmail.com ವಿಳಾಸಕ್ಕೆ ಕಳುಹಿಸುವುದು.

| ತಂಡ | ವರದಿ ಮಾಡಿಕೊಳ್ಳುವ ಸ್ಥಳ | ಸಂಪರ್ಕಿಸಬೇಕಾದ ಉಪನ್ಯಾಸಕರ ಹೆಸರು | ಮೊ.ಸಂ |
|---|---|---|---|
| ಬಾಲಕರು | ಶ್ರೀ ಮಾರಿಕಾಂಬಾ ಸರ್ಕಾರಿ.ಪ.ಪೂ.ಕಾಲೇಜು ಶಿರಸಿ | ಶ್ರೀ ನಾಗರಾಜ.ನಾಯ್ಕ | 9008696957 |
| ಬಾಲಕಿಯರು | | ಶ್ರೀಮತಿ ರತ್ನಮ್ಮಾ.ಡಿ.ಸಿ | 7975296732 |

**ನಿಬಂಧನೆಗಳು:**

1. **19 ವರ್ಷದೊಳಗಿನ ಬಾಲಕ/ಬಾಲಕಿಯರಿಗೆ ಮಾತ್ರ ಅವಕಾಶವಿದ್ದು, ದಿನಾಂಕ:01-01-2006 ರಂದು ಅಥವಾ ನಂತರ ಜನಿಸಿರಬೇಕು. ಕ್ರೀಡಾ ಪಟುಗಳಿಗೆ ಇಲಾಖೆ ನಿಗಧಿಪಡಿಸಿರುವ ಎಸ.ಜಿ.ಎಫ್.ಐ ಅರ್ಹತಾ ಪತ್ರ ಇಂಡೆಮಿನಿಟಿ ಬಾಂಡ್‌ನಲ್ಲಿ ಮಾಹಿತಿಯನ್ನು ತುಂಬಿ ಕಡ್ಡಾಯವಾಗಿ ಉಪನಿರ್ದೇಶಕರ ಸಹಿಯೊಂದಿಗೆ ಹಾಜರುಪಡಿಸುವುದು.**
2. ಕ್ರೀಡಾ ಪಟುಗಳು ಅರ್ಹತಾ ಪತ್ರ ಹಾಗೂ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಹಾಗೂ ಜಿಲ್ಲಾ ಉಪನಿರ್ದೇಶಕರಿಂದ ಕಡ್ಡಾಯವಾಗಿ ದೃಢೀಕರಿಸಿ ತರುವುದು.
3. ಕ್ರೀಡಾಪಟುಗಳು ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ, ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ಝುರಾಕ್ಸ ಪ್ರತಿಯನ್ನು ಕಡ್ಡಾಯವಾಗಿ ತರುವುದು.

4. ತಂಡದ ವ್ಯವಸ್ಥಾಪಕರು ತಮ್ಮ ತಂಡದೊಂದಿಗಿದ್ದು ಕ್ರೀಡಾಪಟುಗಳು ಶಿಸ್ತಿನಿಂದ ವರ್ತಿಸುವಂತೆ ನೋಡಿಕೊಳ್ಳುವುದು.
5. ಬಾಲಕಿಯರ ತಂಡಕ್ಕೆ ಮಹಿಳಾ ವ್ಯವಸ್ಥಾಪಕರನ್ನೇ ನಿಯೋಜಿಸುವುದು.
6. ತಂಡದ ವ್ಯವಸ್ಥಾಪಕರನ್ನು ನಿಯೋಜಿಸಿರುವ ಆದೇಶದ ಪ್ರತಿಯನ್ನು ದ್ವಿಪ್ರತಿಯಲ್ಲಿ ತರುವುದು.
7. ಕ್ರೀಡಾಪಟುಗಳು ವಸತಿ ವ್ಯವಸ್ಥೆ ಕಲ್ಪಿಸಿಕೊಡಲಾದ ಕಾಲೇಜಿಗೆ ಆಸ್ತಿ ಹಾನಿ ಉಂಟು ಮಾಡಿದಲ್ಲಿ ಅದಕ್ಕೆ ತಗಲುವ ವೆಚ್ಚದ ಖರ್ಚನ್ನು ತಂಡದ ಪ್ರವಾಸ ಭತ್ಯೆ ಹಾಗೂ ದಿನ ಭತ್ಯೆಯಲ್ಲಿ ಕಡಿತಗೊಳಿಸಲಾಗುವುದು.
8. ಇಲಾಖಾ ನಿಯಮಾನುಸಾರ ಸ್ಪರ್ಧೆ ಮುಗಿದ ನಂತರ ಜಿಲ್ಲಾ ಕೇಂದ್ರದಿಂದ ಶಿರಸಿ ಪಟ್ಟಣಕ್ಕೆ ಮಾತ್ರ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯನ್ನು ನೀಡಲಾಗುವುದು.
9. ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.
10. ಕ್ರೀಡಾಪಟುಗಳು ಸಮವಸ್ತ್ರದೊಂದಿಗೆ ಹಾಜರಾಗುವುದು.

**<u>ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ:</u>**

1. ಶ್ರೀ ಕೆ.ಎಚ್. ರಾಜಪ್ಪ. ಉಪನಿರ್ದೇಶಕರು, (9449759430)
2. ಶ್ರೀ ಸತೀಶ ಬಿ. ನಾಯ್ಕ, ಪ್ರಾಂಶುಪಾಲರು, (9448964884)
3. ಶ್ರೀ ಬಾಲಚಂದ್ರ. ಭಟ್ಟ., ಪ್ರಾಂಶುಪಾಲರು, (9342995656)
4. ಶ್ರೀ ಆರ.ಟಿ.ಭಟ್ಟ., ಪ್ರಾಂಶುಪಾಲರು, (9449453209)
5. ಶ್ರೀ ರಮೇಶ. ಶೆಟ್ಟಿ., ಪ್ರಾಂಶುಪಾಲರು, (9180474927)
6. ಶ್ರೀ ನರೇಂದ್ರ.ನಾಯಕ., ಪ್ರಾಂಶುಪಾಲರು, (8448530834)
7. ಡಾ// ರಾಘವೇಂದ್ರ.ಹೆಗಡೆ. , ಪ್ರಾಂಶುಪಾಲರು, (9844259203)
8. ಶ್ರೀ ಪ್ರಶಾಂತ. ರಾಣೆ ,ಜಿಲ್ಲಾ ಕ್ರೀಡಾ ಸಂಯೋಜಕರು (ಉ.ಕ), (9480104668)
9. ಶ್ರೀ ದಿವಾಕರ.ನಾಯ್ಕ ,ಉಪನ್ಯಾಸಕರು (9008231086)
10. ಶ್ರೀ ಕಿರಣಕುಮಾರ.N.Y ದೈಹಿಕ ಶಿಕ್ಷಣ ಉಪನ್ಯಾಸಕರು , (8179674669)

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

[redacted] 16.10.24

[redacted]

[redacted]ರ್ವ)

ಉತ್ತರ ಕನ್ನಡ, ಕಾರವಾರ

ಪ್ರತಿಗಳು:

1. ಮಾನ್ಯ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು
2. ಸಹಾಯಕ ನಿರ್ದೇಶಕರು, ಕ್ರೀಡಾ ಶಾಖೆ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು
3. ಪ್ರಾಂಶುಪಾಲರು, ಶ್ರೀ ಮಾರಿಕಾಂಬಾ ಸರಕಾರಿ ಪದವಿ ಪೂರ್ವ ಕಾಲೇಜು, ಶಿರಸಿ.
4. ಕಛೇರಿ ಪ್ರತಿ